ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

15

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 20/10/20

ಮೈಸೂರು ವಿವಿ 100ನೇ ಘಟಿಕೋತ್ಸವದಲ್ಲಿ ಪಿಎಂ ಭಾಷಣ | ನೂತನ ಶಿಕ್ಷಣ ನೀತಿಯ ಅಗತ್ಯತೆ ಪ್ರತಿಪಾದನೆ

# ಭಾರತ ಜಗತ್ತಿನ ಶಿಕ್ಷಣ ಹಬ್ ಆಗಲಿ

ಉದಯವಾಣಿ 20/10/20



**ಮೈಸೂರು:** ಭಾರತವನ್ನು ಉನ್ನತ ಶಿಕ್ಷಣದ ಗ್ಲೋಬಲ್ ಹಬ್ ಮಾಡುವ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ 100ನೇ ಘಟಿಕೋತ್ಸವದಲ್ಲಿ ವರ್ಚುವಲ್ ಲೈವ್ ಮೂಲಕ ಮಾತನಾಡಿದ ಮೋದಿ, ನೂತನ ಶಿಕ್ಷಣ ವ್ಯವಸ್ಥೆಯ ಅಗತ್ಯತೆ ಬಗ್ಗೆ ಒತ್ತಿ ಹೇಳಿದರು. ಐದಾರು ವರ್ಷಗಳಿಂದ ಭಾರತದ ಶಿಕ್ಷಣ ವ್ಯವಸ್ಥೆ ಪರಿವರ್ತನೆಯಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ನಮ್ಮ ಯುವಕರು ಸ್ಪರ್ಧೆ ಮಾಡುವ ನಿಟ್ಟಿನಲ್ಲಿ ಅವರನ್ನು ತಯಾರು ಮಾಡಬೇಕಾಗಿದೆ. ಇದಕ್ಕಾಗಿಯೇ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕಾಗಿ ಕೇಂದ್ರ ಶ್ರಮಿಸುತ್ತಿದೆ ಎಂದೂ ತಿಳಿಸಿದರು.

**ದೊಡ್ಡ ಅಭಿಯಾನ:** ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳನ್ನು ಪ್ರೀ ನರ್ಸರಿಯಿಂದ ಆರಂಭಿಸಿ ಪಿಎಚ್.ಡಿ ಪದವಿ ಪಡೆಯುವವರೆಗೂ ಪೂರ್ತಿ ಬದಲಾವಣೆ ತರುವ ದೊಡ್ಡ ಅಭಿಯಾನವಾಗಿದೆ. ಇದಕ್ಕಾಗಿ ಸ್ಕಿಲ್ಲಿಂಗ್, ರೀ ಸ್ಕಿಲ್ಲಿಂಗ್ ಮತ್ತು ಅಪ್ ಸ್ಕಿಲ್ಲಿಂಗ್ ನಡೆಯಬೇಕಾಗಿದೆ ಎಂದು ಕರೆ ನೀಡಿದರು.

**ಸರ್ವಪಲ್ಲಿ ರಾಧಾಕೃಷ್ಣನ್ ಈ ವಿವಿಯ ಕೊಡುಗೆ:** ಭಾಷಣದ ಮೊದಲಿಗೆ ಎಲ್ಲರಿಗೂ ನಾಡಹಬ್ಬ ಮೈಸೂರು ದಸರಾದ ಶುಭಾಶಯಗಳು ಎಂದು ಕನ್ನಡದಲ್ಲಿ ಶುಭಕೋರಿದ ಪ್ರಧಾನಿ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಿದರು.

ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ದೂರದೃಷ್ಟಿಯ ಫಲವಾಗಿ ಮೈಸೂರು ವಿವಿ ಸ್ಥಾಪನೆಯಾಗಿದೆ. 102 ವರ್ಷಗಳ ಹಿಂದೆ ಇದೇ ದಿನ ನಾಲ್ವಡಿಯವರು ಮೊದಲ ಘಟಿಕೋತ್ಸವ ಭಾಷಣ ಮಾಡಿದ್ದರು. ಅದರ ನಂತರ ಈ ರತ್ನ ಗರ್ಭ ಪ್ರಾಂಗಣದಲ್ಲಿ ಇಂದಿನವರೆಗೂ ಎಷ್ಟೋ ಮಹಾನ್ ವ್ಯಕ್ತಿಗಳು ಪದವಿ ಪಡೆದಿದ್ದಾರೆ. ಅವರಲ್ಲಿ ಸಾಕಷ್ಟು ಮಂದಿ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಸಹ ಒಬ್ಬರು ಎಂದು ಸ್ಮರಿಸಿದರು. ಕುವೆಂಪು ಈ ಕ್ಯಾಂಪಸ್‌ಗೆ ಮಾನಸ ಗಂಗೋತ್ರಿ ಎಂದು ಹೆಸರಿಟ್ಟಿದ್ದಾರೆ. ಆ ಹೆಸರಿನಂತೆ ನಮ್ಮ ಮನಸ್ಸಿನ ಯೋಚನೆಗಳು ಸದಾ ಚಲನಶೀಲವಾಗಿರಬೇಕು ಎಂದರು.

**ಸುಧಾರಣೆಯತ್ತ ಭಾರತ:** ದೇಶದಲ್ಲಿ ಈ ಹಿಂದೆ 16 ಐಐಟಿ ಕೇಂದ್ರಗಳು ಇದ್ದವು. ಕಳೆದ ಆರು ವರ್ಷಗಳಿಂದ ಪ್ರತಿವರ್ಷ ಹೊಸ ಐಐಟಿ ಆರಂಭವಾಗುತ್ತಿವೆ. ಅದರಲ್ಲಿ ಒಂದು ಕರ್ನಾಟಕದ ಧಾರವಾಡದಲ್ಲಿದೆ.

## ಗೊರೂರು ರಾಮಸ್ವಾಮಿ ಸ್ಮರಣೆ

ಪ್ರಧಾನಿ ನರೇಂದ್ರ ಮೋದಿಯವರು ಶಿಕ್ಷಣದ ಮಹತ್ವ ಹೇಳುವ ನಡುವೆ, ಕನ್ನಡ ಭಾಷೆಯ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಹೆಸರನ್ನು ಉಲ್ಲೇಖಿಸಿದ್ದಲ್ಲದೇ, ಅವರು ಹೇಳಿದ್ದ ಶಿಕ್ಷಣವೇ ಜೀವನದ ಬೆಳಕು ಎಂಬ ಮಾತನ್ನು ಉಚ್ಚರಿಸಿ, ಇಂದು ನಮ್ಮ ದೇಶ ಪರಿವರ್ತನೆಯತ್ತ ಹೋಗುತ್ತಿರುವಾಗ ಈ ಮಾತು ಎಂದಿಗಿಂತ ಇಂದು ಪ್ರಸ್ತುತ ಎಂದು ಹೇಳಿದರು.